ಬರೋದು ಸಾಯಂಕಾಲವೇ' ಕನಕಾದೇವಿ ಬೀಗ ತೆಗೆಯತೊಡಗಿದರು. ಶಿವರಾಂ ಅಂದರು: 'ಈ ಜೀವನವೇ ಹಾಗೆ ಅನ್ಸುತ್ತೆ, ಎಲ್ರನ್ನೂ ಒಂದು ಲಯಕ್ಕೆ ಒಗ್ಗಿಸಿಬಿಡುತ್ತೆ...'

ರಾತ್ರಿ ಹತ್ತು ಗಂಟೆಯಾಗಿತ್ತು. ಮೊಬೈಲ್ ಸದ್ದು ಮಾಡತೊಡಗಿತು. 'ಅಂಕಲ್, ದಯಮಾಡಿ ಒಮ್ಮೆ ಕಸದ ಡ್ರಮ್ಮಿದೆಯಲ್ಲ ಅಲ್ಲಿ ಬರ್ತೀರಾ? ಪ್ಲೀಸ್ ಅಂಕಲ್...' ಅಚ್ಚರಿಯಾಯಿತು; ಆತಂಕವೂ ಆಯಿತು. ಯಾಕಿರಬಹುದು? ತಟ್ಟನೆ ಹೊರಟರು.

'ಯಾರು ಇಷ್ಟೊತ್ತಿನಲ್ಲಿ... ಕನಕಾದೇವಿ ಫೋನಾ?' ಬಾಗಿಲು ತೆರೆದವರ ಕಾಲು ತಡೆಯಿತು. ಹಿಂದೆ ತಿರುಗಿ ಹೆಂಡತಿಯ ಮುಖ ಪರೀಕ್ಷಿಸಿದರು. 'ಅಲ್ಲ. ಈಗ ಬಂದೆ...' ಅಂದವರು ಹೊರಬಿದ್ದರು. ಡ್ರಮ್ಮುಗಳ ಹತ್ತಿರ ಪ್ರಮೋದ್ ಮಾರುತಾ ನಿಂತಿದ್ದರು. ಕನಕಾದೇವಿ ಬಂದು ಸೇರಿಕೊಂಡರು. ಮಾರುತಾಳತ್ತ ಒಮ್ಮೆ ನೋಡಿ ಪ್ರಮೋದನೆ ಶುರುಮಾಡಿದ: 'ಅಂಕಲ್... ಆಂಟಿ, ಕುಲದೇವರ ಪೂಜೆಗೆ ಅಂತ ಎರಡು ದಿನ ಹೊರಗೆ ಹೋಗಿದ್ವಿ' ಶಿವರಾಂ ಮಾರುತಾಳ ಕೊರಳನ್ನು ನೋಡಿದರು. ಕೇಳಿದರು: 'ನೀವಿಬ್ರೆ?' 'ಇಲ್ಲ, ಇಬ್ಬರ ಮನೆಯೋರೂ ಬಂದಿದ್ರು. ನಮ್ಮಿಬ್ಬರ ಮದುವೆ ನಿಶ್ಚಯವಾಯ್ತು. ಆಶೀರ್ವದಿಸಿ...' ಇಬ್ಬರೂ ಕೈ ಜೋಡಿಸಿದರು. ಆಶೀರ್ವಾದಕ್ಕೆ ಇಲ್ಲೇಕೆ ಕರೆದದ್ದು ಎಂಬ ಗಲಿಬಿಲಿಯಲ್ಲಿ ಕೈ ಚಲಿಸುವುದು ನಿಧಾನವಾಗುತ್ತಿತ್ತು.

'ಅಂಕಲ್ ಅದೂ.... ಈ ಕ್ಯಾಮರಾದ ಬ್ಯಾಕಪ್ ಎಷ್ಟು ದಿನದ್ದು?...' ಕೇಳಿದ ಪ್ರಮೋದ್.

'ಇಪ್ಪತ್ನಾಲ್ಕು ಗಂಟೆ ಅಷ್ಟೇ' ಅಂದರು.

'ನಿಮ್ಮ ಮೊಬೈಲಿನಲ್ಲೇನಾದ್ರೂ...'

ಪಾಪ! ಅನಿಸಿಬಿಟ್ಟಿತು ಶಿವರಾಂಗೆ. 'ಇಲ್ಲ ಕಣ್ರೋ ಹುಚ್ಚು ಹುಡುಗ್ರಾ. ಕ್ಯಾಮರಾನು ಖಾಲಿ, ಮೊಬೈಲೂ ಖಾಲಿ. ಈಗ ನನ್ನ ನೆನಪು, ಎದೆ ಎಲ್ಲಾ ಖಾಲಿ ಖಾಲಿ. ಸುಖವಾಗಿ ಬಾಳಿ...' ದನಿ ಭಾರವಾಗಿದ್ದಕ್ಕೆ ಎರಡೂ ಕೈ ಮುಂದೆ ಚಾಚಿದರು.

## ಬನವಾಸಿ ವೆಂಕಟೇಶ ದೀಕ್ಷಿತ್

ಬೆಂಗಳೂರಿನಲ್ಲಿ ನೆಲೆಸಿರುವ ಲೇಖಕರು 150ಕ್ಕೂ ಹೆಚ್ಚು ಕತೆಗಳನ್ನು ಪತ್ರಿಕೆಗಳಲ್ಲಿ ಪ್ರಕಟಿಸಿದ್ದಾರೆ. ಬಿ.ಎಸ್ಸಿ ವರೆಗೆ ವಿದ್ಯಾಭ್ಯಾಸ. ಅಂಚೆ ಇಲಾಖೆಯಲ್ಲಿ ಕಲಬುರ್ಗಿಯಲ್ಲಿ, ವೃತ್ತಿಜೀವನದ ಆರಂಭ. ಅಲ್ಲಿಂದ ಭಾರತೀಯ ಸೇನೆ ಸೇರಿ, ವಾರಂಟ್ ಆಫೀಸರಾಗಿ ಕಾಶ್ಮೀರದ ಬಾರಾಮುಲ್ಲಾ, ಕುಪ್ವಾಡಾ, ಶ್ರೀನಗರ, ನಗ್ರೋಟ ಮತ್ತು ನವದೆಹಲಿ, ನಾಗಪುರಗಳಲ್ಲಿ ಸೇವೆ ಸಲ್ಲಿಸಿದ್ದಾರೆ. ಸೇನೆಯ ಸೇವೆಯ ಬಳಿಕ ದೂರಸಂಪರ್ಕ ಇಲಾಖೆಯಲ್ಲಿ ಸೇವೆಗೆ ಸೇರಿ ಉಪಮಹಾಪ್ರಬಂಧಕರ ವೇತನಶ್ರೇಣಿಯಲ್ಲಿ ನಿವೃತ್ತರಾಗಿದ್ದಾರೆ. ಲೇಖಕರ ಪ್ರಕಟಿತ ಕಥಾ ಸಂಕಲನ 'ಕಾವಡಿ'.